## ನೆಂಟರ ಕಾಟ

ರಮೇಶ ಮತ್ತು ರಾಜೇಶ ಗೆಳೆಯರು. ರಮೇಶನ ಮನೆಗೆ ಯಾವಾಗಲೂ ಒಬ್ಬರಿಲ್ಲ ಒಬ್ಬರು ನೆಂಟರು ಬರುತ್ತಿದ್ದರು. ಇದರಿಂದ ಬೇಸತ್ತ ರಮೇಶ ಒಂದಿನ ರಾಜೇಶನ ಬಳಿ ತನ್ನ ಗೋಳು ತೋಡಿಕೊಂಡ. 'ನೋಡು ಮಿತ್ರಾ, ನನ್ನ ಮನೆಯಲ್ಲಿ ಯಾವಾಗಲೂ ನೆಂಟರು ಬರುತ್ತಲೇ ಇರುತ್ತಾರೆ. ನನಗಂತೂ ಸಾಕಾಗಿದೆ ಕಣಯ್ಯ. ಇದಕ್ಕೊಂದು ಪರಿಹಾರ ಇದ್ದರೆ ಹೇಳು' ಎಂದ. ಆಗ ರಾಜೇಶ ಹೇಳಿದ, 'ನೀನು ಕೂಡಲೇ ಯಾವುದಾದರೂ ಒಂದು ವಿಮಾ ಕಂಪನಿಯ ಏಜೆಂಟನಾಗು. ನೋಡು, ದಿನದಿಂದ ದಿನಕ್ಕೆ ನಿಮ್ಮ ಮನೆಗೆ ಬರುವ ನೆಂಟರ ಸಂಖ್ಯೆ ಹೇಗೆ ಕಡಿಮೆಯಾಗುತ್ತಾ ಹೋಗುತ್ತದೆ...' ರಾಜೇಶ ಸೂಚಿಸಿದ ಸುಲಭಮಾರ್ಗ ರಮೇಶನಿಗೂ ಸರಿ ಎನಿಸಿತು.

**ನರಸಿಂಹ ಪೈ**





## ನಗುವುದೊ... ಅಳುವುದೊ...

ಹುಷಾರಿಲ್ಲದ ಗುಂಡನನ್ನು ಅವನ ಮಕ್ಕಳು ಒಂದು ಪ್ರತಿಷ್ಠಿತ ಆಸ್ಪತ್ರೆಗೆ ಸೇರಿಸಿದ್ದರು. ಅಲ್ಲಿನ ಮುಖ್ಯ ವೈದ್ಯರು ರೌಂಡ್ಸ್‌ಗೆ ಬಂದಾಗ ಗುಂಡ ಅವರ ಹತ್ತಿರ, 'ಡಾಕ್ಟರೇ, ನನ್ನನ್ನು ನೋಡಿಕೊಳ್ಳಲು ಒಬ್ಬ ಸುಂದರ ನರ್ಸನ್ನು ನೇಮಕ ಮಾಡಿ ಪ್ಲೀಸ್' ಎಂದಾಗ ಡಾಕ್ಟರ್, 'ಏನ್ರೀ? ಈ ವಯಸ್ಸಿನಲ್ಲಿ...' ಎಂದು ಮುಗುಳ್ನಕ್ಕರು. ಆಗ ಗುಂಡ, 'ಅಯ್ಯೊ, ನನಗಾಗಿ ಕೇಳ್ತಾ ಇಲ್ಲ ಡಾಕ್ಟರ್, ಆವಾಗಲಾದರೂ ನನ್ನ ಮಕ್ಕಳು ನನ್ನನ್ನು ನೋಡಲು ಪದೇ ಪದೇ ಬರ್ತಾರೇನೋ ಅನ್ನೋ ಆಸೆ' ಎಂದಾಗ ವೈದ್ಯರಿಗೆ ನಗುವುದೊ ಅಳುವುದೊ ತಿಳಿಯದಾಯಿತು.

**ವಿ. ವಿಜಯೇಂದ್ರ ರಾವ್**

ಕಲೆ: ಗಣೇಶ ಆಚಾರ್ಯ